ಮರು ಜನ್ಮ ತಳೆದಂತೆ ಸಂಭ್ರಮವಾಗುತ್ತಿತ್ತು. ಹೀಗೆ ಅವರಿಬ್ಬರೂ ಈ ಜಗತ್ತಿನ ಪಾಲಿಗೆ ಬಾಲಿಶವಾದ, ಆದರೆ ತಮ್ಮ ಆತ್ಮಕ್ಕೆ ಅಗತ್ಯವಾಗಿ ಬೇಕಿರುವ ಏನೋ ಒಂದನ್ನು ಪರಸ್ಪರ ವರ್ಗಾಯಿಸಿಕೊಳ್ಳುತ್ತಿದ್ದರು.

ಮುನ್ನಿಯ ಅಣ್ಣ ತಾಂಬೆ ಸಹಾ ಒಂದು ಕಾಲದಲ್ಲಿ ಮುನೀರನ ಆತ್ಮೀಯ ಗೆಳೆಯನೇ ಆಗಿದ್ದ. ಅವರ ನಡುವಿನ ವಯಸ್ಸಿನ ಅಂತರವೂ ಜೊತೆಗೆ ಕುಳಿತು ಆಡುವಷ್ಟು ಸಣ್ಣದಿತ್ತು. ಅವರು ಜೊತೆಯಾಗಿ ಆಡುತ್ತಾ ಕೆತ್ತಿದ್ದ ವಕ್ರ-ಪ್ಯಕ್ರ ರೇಖಾ ಚಿತ್ರಗಳು ಇನ್ನಾದರೂ ಗೋಡೆ, ಜಂತಿಗಳ ಮೇಲೆ ಉಳಿದುಹೋಗಿದ್ದವು. ಮುನೀರನಿಗಿನ್ನೂ ನೆನಪಿತ್ತು: ತಾಂಬೆಯ ಆರನೇ ವರ್ಷದ ಬರ್ತಡೇಗೆ ಅಪ್ಪ-ಅಮ್ಮ ಕೇಕ್ ಕಟ್ ಮಾಡಿಸಿ, 'ಮೊದಲ ತುಂಡು ಯಾರಿಗೆ ತಿನ್ನಿಸ್ತೀ?' ಎಂದು ಕೇಳಿದಾಗ ಅವನು ಏನೊಂದೂ ಯೋಚಿಸದೇ, 'ಮುನೀರನಿಗೆ' ಎಂದಿದ್ದ. ಆರ್ಥಿಕವಾಗಿ ಅಜ-ಗಜದಂತಿದ್ದ ಎರಡು ಬೇರೆ ಬೇರೆ ಮನೆಗಳಿಂದ ಎದ್ದು ಬಂದ ಅವರಿಬ್ಬರೂ ಒಂದೇ ಅಂಗಳದ ಒಂದೇ ದೂಳಿನಲ್ಲಿ ಕೆಂಪಗಾಗುತ್ತಿದ್ದರೆ ಅದು ತಾಂಬೆಯ ಮನೆಯವರಿಗೆ ಇರುಸು ಮುರುಸನ್ನುಂಟು ಮಾಡುತ್ತಿತ್ತು. ಅವರು ಆದಷ್ಟೂ ತಮ್ಮ ಮಗನ ಚಲನವಲನವನ್ನು ತಮ್ಮ ಭವ್ಯ ಮನೆಯ ಪ್ರಾಂಗಣಕ್ಕೇ ಸೀಮಿತ ಮಾಡಲು ಪ್ರಯತ್ನಿಸುತ್ತಿದ್ದರು. ಆದರೆ ಅವರ ಈ ಬಂಧನ ಅತಿಯಾದಾಗ ಮಾತ್ರ ತಾಂಬೆ ಅತ್ತೇ ಬಿಡುತ್ತಿದ್ದ. ಅಳುತ್ತಳುತ್ತಲೇ ಅವನು ಕೇಳುತ್ತಿದ್ದ, 'ಮುನೀರನ ಜೊತೆ ಆಡಿದರೆ ಏನು ತಪ್ಪು?' ಎಂಬ ಪ್ರಶ್ನೆಗೆ ಮನೆಯವರ ಹತ್ತಿರ ಸಮರ್ಪಕವಾದ ಉತ್ತರವಿರಲಿಲ್ಲ. ಅಥವಾ ಅವರು ಕೊಡುತ್ತಿದ್ದ, ಆರ್ಥಿಕತೆ, ಘನತೆಗಳಿಗೆ ನೇರವಾಗಿ ಸಂಬಂಧಿಸಿದ ಕಾರಣಗಳು ತಾಂಬೆಗೆ ಅರ್ಥವೂ ಆಗುತ್ತಿರಲಿಲ್ಲ. ಹೀಗೆ ಅಕ್ಕಪಕ್ಕದಲ್ಲಿ ನಿಂತ ಒಂದು ಬಂಗಲೆ ಹಾಗೂ ಒಂದು ಹಂಚಿನ ಮನೆಯ ಕಾಂಪೌಂಡಿನಿಂದ ಹಬ್ಬಿ, ಒಂದಕ್ಕೊಂದು ಚಾಚಿ ನಿಂತ ಮರಗಳಂತೆ ಅವರು ಇದ್ದರು.

ಸಮಯ ಸರಿಯಿತು. ಚಿಕ್ಕದೇ ಆದರೂ ವಯಸ್ಸಿನಲ್ಲಿದ್ದ ಅಂತರ ಬದುಕಿನ ದಾರಿಯಲ್ಲಿ ಉಂಟು ಮಾಡಿದ ಕವಲಿನಿಂದಾಗಿಯೋ ಅಥವಾ ಆರ್ಥಿಕ ಸ್ಥಿತಿಗತಿ ಸೃಷ್ಟಿಸಿದ ಯೋಚನೆಯಲ್ಲಿನ ಭಿನ್ನತೆಯಿಂದಲೋ ಅವರ ದಾರಿ ಬದಲಾಯಿತು. ತಾಂಬೆಗಿಂತ ಮೊದಲು ಮುನೀರ ಬೆಂಗಳೂರು ಸೇರಿದ. ನಂತರ ತಾಂಬೆಯೂ ಶಹರ ತಲುಪಿದ. ಅಲ್ಲಿ ಒಂದರಿಂದೊಂದು ದೂರ ನಿಂತ ಯಾವುದೋ ಎರಡು ಏರಿಯಾಗಳು ಅವರಿಗೆ ನೆರಳು ನೀಡಿದವು. ಒಂದಕ್ಕೊಂದು ಕನೆಕ್ಷನ್ ಇಲ್ಲದ ಬೇರೆ ಬೇರೆ ಕಂಪನಿಗಳು ಅವರನ್ನು ಸಾಕತೊಡಗಿದವು. ಅವರ ಹಗಲು, ಕೆಲಸ, ದಾರಿ, ಪ್ರಾಮುಖ್ಯತೆಗಳು ಬದಲಾದವು. ಅಲ್ಲಿಯ ಒತ್ತಡ, ಜವಾಬ್ದಾರಿ, ತಲೆಬಿಸಿ, ಒದ್ದಾಟಗಳಿಗೆ ಹೊಂದುವಂಥಾ ಗೆಳೆಯರ ಬಳಗ ಅವರನ್ನು ಸುತ್ತುವರಿಯಿತು. ಇದೆಲ್ಲದರ ನಡುವೆ ಅವರು ಒಮ್ಮೆಯಾದರೂ ಒಬ್ಬರನ್ನೊಬ್ಬರು ಭೇಟಿಯಾಗಲೇ ಇಲ್ಲ. ಅಂಥಾದ್ದೊಂದು ಅನಿವಾರ್ಯತೆಯೂ ಅವರಿಗೆ ಕಾಣಿಸಲಿಲ್ಲ.

ಊರಿನಲ್ಲವರು ಜೊತೆಯಾಗಿ ಬರೆದ ರೇಖಾ ಚಿತ್ರಗಳು ಮಾತ್ರ ಯಾವುದೋ ಗತದ ಕಥೆ ಹೇಳುವ ನಿಶಾನೆಗಳಂತೆ ನಿಂತಲ್ಲೇ ಮಳೆ, ಬಿಸಿಲುಗಳಿಗೆ ತುತ್ತಾಗುತ್ತಾ, ಸವೆಯುತ್ತಾ ಉಳಿದುಹೋದವು.

* * *

ಹಳ್ಳಿ ಮುದಿಯಾಗಿತ್ತು. ಅಲ್ಲಿನ ಯುವ ಸಮೂಹದ ಒಂದು ದೊಡ್ಡ ಭಾಗ ಪಟ್ಟಣ ಸೇರಿಕೊಂಡಿತ್ತು. ವರ್ಷಾನುವರ್ಷದಿಂದ ಕೃಷಿ, ಕೂಲಿ ಮಾಡಿದವರು, ಪಟ್ಟಣದ ನಯ-ನಾಜೂಕಿಗೆ ಹೊಂದಿಕೊಳ್ಳಲಾಗದಷ್ಟು ಬದುಕಿಬಿಟ್ಟವರು, ತಮ್ಮ ಆತ್ಮವನ್ನು ಹಳ್ಳಿಯ ಶ್ರಮಕ್ಕೆ ಬರೆದುಕೊಟ್ಟವರು... ಹೀಗೆ ಆಧುನಿಕತೆ ಹಿಂದೆ ಬಿಟ್ಟು ಹೋದಂತೆ ಕಾಣುವವರು ಮಾತ್ರ ಹಳ್ಳಿಯಲ್ಲಿ ಉಳಿದಿದ್ದರು. ಇನ್ನು ಅಲ್ಲಿನ ಮಕ್ಕಳಾದರೂ ಇಂಗ್ಲಿಷು ಶಾಲೆಗಳಿಗೆ ಹೋಗುತ್ತಾ, ಪರಿಸರ-ಕೃಷಿಗಳಿಗೆ ಸಂಬಂಧಿಸದ್ದೇನನ್ನೋ ಕಲಿಯುತ್ತಾ ಮುಂಬಾಳಿನ ಮಹಾ ವಲಸೆಗೆ ತಯಾರಾಗುತ್ತಿರುವಂತೆ ಬೆಳೆಯುತ್ತಿದ್ದರು.

ಬೆಳಗಾಗೆದ್ದು, ಇಂದು ಮಾಡಬೇಕಾದ ಕೆಲಸಗಳ ದೊಡ್ಡ ಪಟ್ಟಿಯೊಂದನ್ನು ತಲೆಯೊಳಗಿಟ್ಟುಕೊಂಡು ಹೊಲಗಳಿಗೆ, ಪಟ್ಟಣಕ್ಕೆ ಹೋಗುವವರ ನಡುವೆ ಅಂಥಾ ಯಾವ ಮಹದುದ್ದೇಶವೂ ಇಲ್ಲದ ಹಗಲಿಗೆ ಕಾಲಿಡುತ್ತಿದ್ದ ಮುನೀರ ಚಲಿಸುವ ಚಕ್ರದಿಂದ ಆಚೆ ಬಿದ್ದ ಬಾಲ್ ಬೇರಿಂಗ್‌ನ ಗೋಲಿಯಂತಾಗಿದ್ದ. ಅವನಿಗೆ ತನ್ನ ಬದುಕೀಗ ಹಗಲೂ ಅಲ್ಲದ, ಇರುಳೂ ಅಲ್ಲದ, ಸಿಟಿಯೂ ಅಲ್ಲದ, ಹಳ್ಳಿಯೂ ಅಲ್ಲದ, ಯಾವುದಕ್ಕೂ